ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ರಾಜ್ಯದಾದ್ಯಂತ ಈವರೆಗೆ ನವೀಕರಿಸಲಾಗದ ಅಬಕಾರಿ ಪರವಾನಿಗೆಗಳ ಕುರಿತು

ಶ್ರೀ ಹೆಚ್. ಎಂ. ರಮೇಶಗೌಡ(ವಿಧಾನಸಭೆಯಿಂದ ಚುನಾಯಿತರಾದವರು) –

529 (476) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಾದ್ಯಂತ ಈವರೆಗೆ ನಮೀಕರಿಸದೆ ಉಳಿಸಿಕೊಂಡಿರುವ ಅಬಕಾರಿ ಪರವಾನಗಿಗಳ ಸಂಖ್ಯೆ ಎಷ್ಟು; ಈ ಪರವಾನಗಿಯಲ್ಲಿ ಕಾರ್ಯಾಚರಿಸುತ್ತಿರುವ ವರ್ತಕರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಆ) ರಾಜ್ಯದಲ್ಲಿ ಹೊಸದಾಗಿ ನೀಡಲಾಗುತ್ತಿರುವ ಎಂ.ಎಸ್.ಐ.ಎಲ್ ಮಳಿಗೆಗಳ ಸಂಖ್ಯೆ ಎಷ್ಟು; ಹೊಸ ಎಂ.ಎಸ್.ಐ.ಎಲ್. ಮಳಿಗೆಗಳನ್ನು ಸ್ಥಾಪಿಸಲು ಇರುವ ಮಾನದಂಡಗಳೇನು; ಎಂ.ಎಸ್.ಐ.ಎಲ್ ನಿಂದ ಸರ್ಕಾರಕ್ಕೆ ಮತ್ತು ಮಳಿಗೆ ನಡೆಸುವವರಿಗೆ ಇರುವ ಲಾಭಗಳೇನು;

(ಇ) ರಾಜ್ಯದಲ್ಲಿ ಲಾಕ್‌ಡೌನ್ ಸಂದರ್ಭದಲ್ಲಿ ಅಬಕಾರಿ ಇಲಾಖೆಗೆ ಆದ ನಷ್ಟವೆಷ್ಟು; ಮದ್ಯದಂಗಡಿಗಳನ್ನು ತೆರೆದು ನಂತರ ಇಲ್ಲಿಯವರೆಗೆ ಸರ್ಕಾರದ ಬೊಕ್ಕಸಕ್ಕೆ ಬಂದ ಹಣವೆಷ್ಟು; (ಅಂಕಿಅಂಶ ಸಹಿತ ಮಾಹಿತಿ ನೀಡುವುದು)

(ಈ) ಆನ್‌ಲೈನ್ ಮದ್ಯ ಮಾರಾಟದ ಪ್ರಸ್ತಾವನೆ ಈಗಲೂ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಸರ್ಕಾರ ಆನ್‌ಲೈನ್ ಮದ್ಯ ಮಾರಾಟ ಆರಂಭಿಸುತ್ತದೆಯೇ?